ದಕ್ಷಿಣ ಭಾರತ ಸಭೆ
ಕರ್ನಾಟಕ ಮಧ್ಯಸಭಾ ಪ್ರಾಂತ

ಮಹಿಳಾ ಅನ್ಯೋನ್ಯ ಕೂಟ



ಆರಾಧನಾ ಕ್ರಮ

ಮಹಿಳಾ ಭಾನುವಾರ – 2019

ವಿಷಯ :

ಮಹಿಳೆಯರು ಶಾಂತಿ ಸಂಪರ್ಕದ ಸೇತುವೆಗಳು

ಆರಾಧನೆಗೆ ಕರೆ :

ನಾಯಕ : ದೇವರು ನಮ್ಮನ್ನು ಆರಾಧನೆಯ ಹಾಗೂ ಆರೈಕೆಯ ಸಮುದಾಯದಲ್ಲಿ ಒಟ್ಟುಗೂಡಿಸಿದ್ದಾನೆ.

ಸಭೆ : ದೇವರನ್ನು ನಾವು ಸ್ತುತಿಸಿ, ಪ್ರೀತಿಯಿಂದಲೂ ಆರಾಧಿಸೋಣ.

ನಾಯಕ : ದೇವರ ಮಕ್ಕಳೆಲ್ಲರೂ ತಮ್ಮ ಅರಸನಲ್ಲಿ ಸಂತೋಷಿಸಲಿ.

ಸಭೆ : ನಾವು ದೇವರಲ್ಲಿ ಸಂತೋಷಿಸುತ್ತೇವೆ! ದೇವರ ಪವಿತ್ರ ನಾಮಕ್ಕೆ ಮಹಿಮೆಯನ್ನು ಸಲ್ಲಿಸುತ್ತೇವೆ.

ನಾಯಕ : ಲೋಕದ ಕಟ್ಟಕಡೆಯವರೆಲ್ಲಾ ಸ್ಮರಿಸಲಿ ಹಾಗೂ ದೇವರ ಕಡೆಗೆ ತಿರುಗಿಕೊಳ್ಳಲಿ.

ಸಭೆ : ದೇಶದ ಸಮಸ್ತ ಕುಟುಂಬಗಳು ದೇವರನ್ನು ಆರಾದಿಸಲಿ. ಸಸ್ತ ರಾಷ್ಟ್ರಗಳನ್ನು ಆಳುವ ಹಾಗೂ ನಮ್ಮ ಅಗತ್ಯತೆಗಳನ್ನು ಒದಗಿಸುವ ದೇವರಿಗೆ ಅಧಿಕಾರವು ಸಲ್ಲಿಸಲ್ಪಡಲಿ.

ನಾಯಕ : ನಮ್ಮ ಕ್ರೈಸ್ತ ಪಾರಂಪರ್ಯಕ್ಕಾಗಿ ದೇವರನ್ನು ಸ್ತುತಿಸಿ ಆರಾಧಿಸೋಣ.

ಸಭೆ : ಸರ್ವರಿಗೆ ಜೀವಶ್ವಾಸ ನೀಡುವ ದೇವರಿಗೆ ಸ್ತುತಿ ಸಲ್ಲಿಸಲು ನಾವು ಒಟ್ಟುಗೂಡುತ್ತೇವೆ.

ಸ್ತುತ್ಯಾರಾಧನೆ :

ನಾಯಕ : ಅತೀತ ದೇವರೇ, ನಿನ್ನ ಸೃಷ್ಟಿಯಲ್ಲಿ ಸ್ತ್ರೀ–ಪುರುಷರನ್ನು ಏಕರೀತಿಯಲ್ಲಿ ನೋಡಿದ್ದಾಕ್ಕಾಗಿ ನಿನ್ನನ್ನು ಸ್ತುತಿಸುತ್ತೇವೆ. ನೀನು ಸ್ತ್ರೀ–ಪುರುಷರಿಬ್ಬರನ್ನು ಸ್ವಸ್ಥಗೊಳಿಸಿ, ಅವರಲ್ಲಿ ಅದ್ಭುತಗಳನ್ನು ನಡೆಸಿ, ಅವರಿಗೆ ಭೋಧಿಸಿ ಆ ಮೂಲಕ ಮಾದರಿಯನ್ನು ತೋರಿಸಿ ಪರಸ್ಪರರ ಭಿನ್ನತೆಯನ್ನು ಗೌರವಿಸಲು ಮತ್ತು ಗ್ರಹಿಸಲು ಕಲಿಸಿದ್ದೀ. ನೀನು ನಿನ್ನ ಸೃಷ್ಟಿಯನ್ನು ಪ್ರೀತಿಸಿದ್ದೀ, ಈ ಲೋಕವು ನಿರ್ಭಯವಾಗಿ ಜೀವಿಸಲು ನಿನ್ನ ಮಕ್ಕಳು ನಿನ್ನ ಹಾದಿಯಲ್ಲಿ ನಡೆಯಲು ನಿರೀಕ್ಷಿಸುತ್ತಿರುವೆ.

ಸಭೆ : ಅತೀತ ದೇವರೇ, ನಿನ್ನನ್ನು ಸ್ತುತಿಸುತ್ತೇವೆ.

ನಾಯಕ : ಸೃಷ್ಟಿಕರ್ತ ದೇವರೇ, ನಿನ್ನ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟು, ಕ್ರಿಸ್ತನಲ್ಲಿ ಶಿಷ್ಯತ್ವಕ್ಕೆ ಕರೆಯಲ್ಪಟ್ಟು ಮತ್ತು ಪವಿತ್ರಾತ್ಮನ ಮೂಲಕ ಸಶಕ್ತಗೊಂಡ ಸ್ತ್ರೀಯರ ಈ ಧನ್ಯತಾ ಸಮುದಾಯಕ್ಕಾಗಿ ನಿನ್ನನ್ನು ಸ್ತುತಿಸುತ್ತೇವೆ.

ಸಭೆ : ಸೃಷ್ಟಿಕರ್ತ ದೇವರೇ, ನಾವು ನಿನ್ನ ನಾಮವನ್ನು ಮಹಿಮೆಪಡಿಸುತ್ತೇವೆ.

ನಾಯಕ : ಸರ್ವಶಕ್ತ ದೇವರೇ, ನಾವು ಸೇವೆಗಾಗಿಯೂ ನಾಯಕತ್ವಕ್ಕಾಗಿಯೂ ರೂಪಗೊಳ್ಳಲು ನಾವು ಸಮಾಧಾನಪಡಿಸುವ, ಕರುಣೆ, ಶಮೆದಮೆ, ಐಕ್ಯತೆ ಮತ್ತು ಪ್ರೀತಿಯನ್ನು ಎಂಬ ನಿನ್ನ ಆತ್ಮನ ಅಮೋಘವಾದ ವರಗಳನ್ನು ಹೊಂದಿಕೊಂಡದ್ದಕ್ಕಾಗಿ ನಿನ್ನನ್ನು ಹಾಡಿ ಹರಸುತ್ತೇವೆ.

ಸಭೆ : ಸರ್ವಶಕ್ತ ದೇವರೇ, ನಿನ್ನನ್ನು ಸ್ತುತಿಸುತ್ತೇವೆ.

ನಾಯಕ : ವಿಶ್ವದ ಅದೃಶ್ಯ ದೇವರೇ, ಜೀವದಾನಿಯೇ, ಎಲ್ಲರೂ ಏಕ್ಯತೆಯಲ್ಲಿ ಬದುಕುವಂತೆ ಮಾಡಿರುವ ನಿನ್ನ ವಿನ್ಯಾಸಕ್ಕಾಗಿ ನಾವು ನಿನ್ನನ್ನು ಸ್ತುತಿಸುತ್ತೇವೆ. ನಾವು ವಾಸಿಸುವ ಈ ವಿಶಾಲ ಜಗತ್ತಿನಲ್ಲಿ ಸಾಮರಸ್ಯಕ್ಕಾಗಿ ಶ್ರಮಿಸುವ ಸಲುವಾಗಿ ನೀನು ನಮಗೆ ಅನುಗ್ರಹಿಸಿರುವ ಜೀವನವನ್ನು ವಿನಿಯೋಗಿಸಿಕೊಳ್ಳಲು ನೇಮಿಸಿರುವ ನಮ್ಮ ಪಾತ್ರವನ್ನು ಸ್ಮರಿಸಿಕೊಳ್ಳುತ್ತೇವೆ.

ಸಭೆ : ಅದೃಶ್ಯ ದೇವರನ್ನು ಸ್ತುತಿಸುತ್ತೇವೆ ಮತ್ತು ಕೊಂಡಾಡುತ್ತೇವೆ.

ಪಾಪದರಿಕೆಯ ಪ್ರಾರ್ಥನೆ :

ಪಾಪದರಿಕೆಗೆ ಕರೆ : (ಸ್ವಲ್ಪ ಸಮಯದ ಮೌನದ ನಂತರ ಈ ಕೆಳಗಿನ ಗೀತೆಯನ್ನು ಪ್ರಾರ್ಥನಾ ಪೂರ್ವಕವಾಗಿ ಹಾಡತಕ್ಕದ್ದು) ಕೈಯಲ್ಲಿ ಒಂದೂ ಇಲ್ಲದೇ..... (ಸಂ. 152)

ನಾಯಕ : ಸರ್ವಶಕ್ತ ದೇವರೇ, ನಾವು ನಿನ್ನವರು ಎಂಬುದನ್ನು ಆಗಾಗ್ಗೆ ಮರೆತಿದ್ದೇವೆ ಮತ್ತು ನಮ್ಮ ಹೊರೆಗಳನ್ನು ಹೊತ್ತುಕೊಂಡು ನಾವು ಸ್ವೇಚ್ಛೆಯಿಂದ ನಡೆದು ಕೊಳ್ಳಲು ಪ್ರಯತ್ನಿಸುತ್ತೇವೆ ಎಂದು ಅರಿಕೆ ಮಾಡುತ್ತೇವೆ. ನಿನ್ನ ಮಹಿಮೆಗೆ ಸಾಕ್ಷಿಗಳಾಗಲು ನಾವು ವಿಫಲರಾಗಿದ್ದೇವೆ ಎಂದು ನಿನ್ನಲ್ಲಿ ಕ್ಷಮೆ ಯಾಚಿಸುತ್ತೇವೆ.

ಸಭೆ : ವೈಯಕ್ತಿಕ ದೇವರೇ, ನಮ್ಮನ್ನು ಕ್ಷಮಿಸು.

ನಾಯಕ : ಪರಿಶುದ್ಧ ದೇವರೇ, ನಾವು ನಿನ್ನಿಂದ ಗುಪ್ತವಾಗಿಡಲು ಪ್ರಯತ್ನಿಸಿದ ಸಂಗತಿಗಳನ್ನು ಒಪ್ಪಿಕೊಳ್ಳುತ್ತೇವೆ, ನಮ್ಮ ಪಾಪಗಳಿಂದ ನಮ್ಮನ್ನು ಬಿಡಿಸು, ನಿನ್ನ ಕೋಪದ ನಿಮಿತ್ತ ನಮ್ಮನ್ನು ಖಂಡಿಸಬೇಡ, ನಾವು ನಿನ್ನಿಂದ ಅಗಲಿಹೋಗಿದ್ದೇವೆ.

ಸಭೆ : ಪರಿಶುದ್ಧ ದೇವರೇ, ನಮ್ಮನ್ನು ಕ್ಷಮಿಸು.

ನಾಯಕ : ಕೃಪಾಪೂರ್ಣನೂ ಕಾರುಣ್ಯಮೂರ್ತಿಯೂ ಆಗಿರುವ ಪ್ರೀತಿಯ ದೇವರೇ, ನಮ್ಮ ಹೃದಯದ ಕಠಿಣತೆಯನ್ನು ಮತ್ತು ನಮ್ಮ ಸಹಮಾನವರನ್ನು ಕ್ಷಮಿಸದೇ ಇರುವ ನಮ್ಮ ಅವಗುಣವನ್ನು ಅರಿಕೆ ಮಾಡುತ್ತೇವೆ.

ಸಭೆ : ನಮ್ಮ ಪ್ರೀತಿರಹಿತತೆಯನ್ನು ಕ್ಷಮಿಸು ದೇವರೇ.

ನಾಯಕ : ಕಾರಣ್ಯಮಯ ದೇವರೇ, ನಾವು ಅಪಕಾರಿಗಳಾಗಿಯೂ ಆತ್ಮಿಕ ಕುರುಡರಾಗಿಯೂ ಇದ್ದುಕೊಂಡು ಜಗತ್ತಿನಲ್ಲಿ ನಾವು ಕಾಣುವ ಅದ್ಭುತಗಳನ್ನು ಪ್ರಶಂಸಿಸದೇ ಇರುವುದನ್ನು ಕ್ಷಮಿಸು.

ಸಭೆ : ಕರುಣೆಯುಳ್ಳ ದೇವರೇ, ನಮ್ಮನ್ನು ಕ್ಷಮಿಸು.

ನಾಯಕ : ಅತ್ಯುನ್ನತ ದೇವರೇ, ಅಗತ್ಯವಿರುವವರಿಗೆ ಅವರ ಅಗತ್ಯ ಸಮಯದಲ್ಲಿ ಸೇವೆ ಸಲ್ಲಿಸಲು ಮರೆತ್ತಿದ್ದೇವೆ, ನಾವು ಸ್ವ–ಕೇಂದ್ರಿತರಾಗಿ ಇತರರ ಕುರಿತು ಕಾಳಜಿವಹಿಸಲು ವಿಫಲರಾಗಿದ್ದೇವೆ.

ಸಭೆ : ಕರುಣಾಮಯಿಯಾದ ದೇವರೇ, ನಮ್ಮನ್ನು ಕ್ಷಮಿಸು.

ಪಾಪ ಕ್ಷಮಾಪಣೆಯ ಪ್ರಾರ್ಥನೆ : (ಸಭಾಪಾಲಕರಿಂದ)

ಗುಣಪಡಿಸುವ ಮತ್ತು ಕ್ಷಮಿಸುವ ದೇವರು ನಮ್ಮನ್ನು ತನ್ನ ಕಡೆಗೆ ತಿರುಗಿಸಿಕೊಳ್ಳಲಿ ಮತ್ತು ನಾವು ತನ್ನ ಮಗನ ಮಹಿಮೆಯನ್ನು ನೋಡುವುದಕ್ಕಾಗಿ ಎಲ್ಲಾ ಪಾಪಗಳಿಂದ ನಮ್ಮನ್ನು ಶುದ್ಧೀಕರಣ ಗೊಳಿಸಲಿ, ವಾಕ್ಯವಾಗಿದ್ದಾತನನ್ನು ನರಾವತಾರಿಯಾಗಿಯೂ ನಮ್ಮ ಕರ್ತನಾದ ಯೇಸುಕ್ರಿಸ್ತನನ್ನಾಗಿಯೂ ತನ್ನ ಮಗನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟ ದೇವರು ತಾನೇ ನಮಗೆ ಕ್ಷಮಾಪಣೆಯನ್ನೂ ಸಮಾಧಾನವನ್ನೂ ಈಗಲೂ ಯಾವಾಗಲೂ ಅನುಗ್ರಹಿಸಲಿ.

ಈ ದಿನಕ್ಕೆ ನೇಮಕವಾದ ಪ್ರಾರ್ಥನೆ :

ದೇವರೇ, ಸಮಾಧಾನದ ಮೂಲಕಾರಣನೇ, ಸಮಾನತೆಯ ಪ್ರಿಯನೇ, ನಮ್ಮ ಅಮರತೆಯ ಅರಿವೇ, ಸ್ವಾತಂತ್ರ್ಯದಿಂದೊಡಗೂಡಿದ ಪರಿಪೂರ್ಣ ಸೇವೆಯು ನಿನ್ನದು; ಛಿದ್ರವಾಗಿಯೂ ವಿಭಜಿತವಾಗಿಯೂ ಇರುವ ನಮ್ಮ ಜಗತ್ತಿನ ಮೇಲೆ ನಿನ್ನ ದಯೆಯಿರಲಿ. ಎಲ್ಲರ ಹೃದಯಗಳಲ್ಲಿ ನಿನ್ನ ಶಾಂತಿಯನ್ನು ಪಸರಿಸಿ ಯುದ್ಧವನ್ನು ಪ್ರಚೋದಿಸುವ ಮನೋಭಾವನೆಯನ್ನು ತೊಲಗಿಸು ಆ ಮೂಲಕ ಎಲ್ಲಾ ಜನಾಂಗಗಳು ಎಲ್ಲಾ ಜನರು ಒಂದೇ ಕುಟುಂಬದ ಸದಸ್ಯರಂತೆ ಬದುಕಲು ಕಲಿಯುವಂತೆಯೂ ನಿನ್ನ ನಿಯಮಗಳಿಗೆ ವಿಧೇಯರಾಗಿರಲೂ ಸಹಾಯಿಸು. ನಿನ್ನ ವಿನಮ್ರ ಸೇವಕರಾದ ನಮ್ಮನ್ನು ಶತ್ರುಗಳ ಆಕ್ರಮಣಗಳಿಂದ ತಪ್ಪಿಸು, ನಾವು ನಿನ್ನ ರಕ್ಷಣೆಯಲ್ಲಿ ಭರವಸೆಯುಳ್ಳವರಾಗಿ ವಿರೋಧಿಗಳ ಯಾವುದೇ ಶಕ್ತಿಯ ಮುಂದೆ ಅಭಯದಿಂದಿರಲು ನಮ್ಮ ಕರ್ತನಾದ ಯೇಸುಕಿಸ್ತನ ಬಲದಿಂದ ನಮ್ಮನ್ನು ರಕ್ಷಿಸು. **ಆಮೆನ್.**

ಉಪಕಾರ ಸ್ತುತಿ :

ನಾಯಕ : ವಿಶ್ವದ ಸೃಷ್ಟಿಕರ್ತ ದೇವರೇ, ದಿನಂಪ್ರತಿ ನಮ್ಮ ಜೀವನದಲಿ ಹಾದುಹೋಗುವ ಅಸಂಖ್ಯಾತ ಅಪಾಯಗಳಿಂದ ನಮ್ಮನ್ನು ಕಾದಿದ್ದೀ, ಈ ಜೀವವು ನಮಗೆ ಕೃಪೆಯ ವರದಾನವಾಗಿದೆ.

ಸಭೆ : ಕರ್ತನೇ, ಜೀವದ ಉಡುಗೊರೆಗಾಗಿ ನಾವು ನಿನಗೆ ಉಪಕಾರ ಸಲ್ಲಿಸುತ್ತೇವೆ.

ನಾಯಕ : ಯುದ್ಧಗಳಲ್ಲಿ ಸೈನಿಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯಯರು ಮತ್ತು ಮಕ್ಕಳು ಕೊಲ್ಲಲ್ಪಟ್ಟಿದ್ದಾರೆ ಎಂಬುದನ್ನು ನಾವು ಅರಿತವರಾಗಿದ್ದೇವೆ, ಮಹಿಳೆಯರು ಹೀಗೆ ಹೀನಾಯವಾಗಿ ಕೊಲ್ಲಲ್ಪಟ್ಟಿದ್ದರೂ ಶಾಂತಿಯನ್ನು ಪಸರಿಸುವ ಅತ್ಯುತ್ತಮ ಮಿತ್ರರೆಂದು ಸಾಬೀತುಪಡಿಸಿದ್ದಾರೆ.

ಸಭೆ : ಕರ್ತನೇ, ನಿನಗೆ ಉಪಕಾರ ಸಲ್ಲಿಸುತ್ತೇವೆ.

ನಾಯಕ : ಕ್ರಿಸ್ತಶಕ 1820ರಲ್ಲಿ ಜನಿಸಿ ಹ್ಯಾರಿಯೆಟ್ ಟಬ್ಮ್ಯಾನ್ ಎಂಬ ಸ್ತ್ರೀಯರನ್ನು ಸ್ಮರಿಸಿಕೊಂಡು ನಿನಗೆ ಉಪಕಾರ ಸಲ್ಲಿಸುತ್ತೇವೆ. ತಪ್ಪಿಸಿಕೊಂಡ ಗುಲಾಮೆಯಾದ ಈಕೆಯು ಕ್ರಿಸ್ತಶಕ 1863ರಲ್ಲಿ ನಡೆದ ಅಂತರ್ಯುದ್ಧದಲ್ಲಿ ಮೇರಿ ಲ್ಯಾಂಡಿನ ದಾದಿಯಾಗಿ 300 ಜನರಿಗಿಂತಲೂ ಹೆಚ್ಚಿನ ಸ್ವಾತಂತ್ರ್ಯ ಹೋರಾಟಗಾರರಿಗೆ ಸಹಕಾರಿಯಾಗಿದ್ದಳು, ಅಷ್ಟು ಮಾತ್ರವಲ್ಲದೇ, ಮರಣದ ದವಡೆಯಲ್ಲಿ ಸಿಕ್ಕಿಕೊಂಡಿದ್ದ ಸೈನಿಕರು ತಿರುಗಿ ಬದುಕಿಕೊಳ್ಳುವಂತೆ ಸೇವೆ ಸಲ್ಲಿಸಿದ್ದಳು.

ಸಭೆ : ಕರ್ತನೇ, ನಿನಗೆ ಉಪಕಾರ ಸಲ್ಲಿಸುತ್ತೇವೆ.

ನಾಯಕ : ಪ್ಯಾಲೆಸ್ತೀನಿಯರ ಹಾಗೂ ಯೆಹೂದ್ಯರ ನಡುವಿನ ಶಾಂತಿ ಸ್ಥಾಪನೆಗಾಗಿ ವಿವಿಧ ವಿಶ್ವಶಾಂತಿ ಸಮಾವೇಶಗಳಲ್ಲಿ ಧೈರ್ಯದಿಂದ ವಾದಿಸುವ ಅಡಾ ಅಹರೋನಿ ಎಂಬ ಯೆಹೂದಿ ಮಹಿಳೆಗಾಗಿ ನಾವು ಕೃತಜ್ಞರಾಗಿದ್ದೇವೆ. ಈಕೆಯು ಪ್ಯಾಲೆಸ್ತೀನ ಹಾಗೂ ಯೆಹೂದ್ಯರ ಸಂಘರ್ಷದಿಂದ ಬಾದಿಸಲ್ಪಟ್ಟವರಲ್ಲಿ ಓರ್ವಳಾಗಿದ್ದು, ಶಾಂತಿಯ ಸೇತುವೆಯಾಗಲು ಎಲ್ಲಾ ಜನರಿಗೆ ಕರೆಕೊಡುವವಳಾಗಿದ್ದಾಳೆ.

ಸಭೆ : ಕರ್ತನೇ, ನಿನಗೆ ಉಪಕಾರ ಸಲ್ಲಿಸುತ್ತೇವೆ.

ನಾಯಕ : ಸ್ತ್ರೀಯರೇ ಶಾಂತಿಯ ಆರಂಭ ಬಿಂದುವಾಗಿದ್ದಾರೆ ಎಂದು ಅರಿವು ಮೂಡಿಸಿದ ನೈಜೀರಿಯಾದ ಫಾತೀಮಾಳನ್ನು ಸ್ಮರಿಸುತ್ತೇವೆ. ಪ್ರಾಮುಖ್ಯವಾಗಿ ಸಂಧಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿದವರು ಇತರರಿಗೆ ಮಾದರಿಯಾಗಬಹುದು ಎಂಬುದನ್ನು ಮನವರಿಕೆ ಮಾಡಿಸಿದಳು ಅಷ್ಟುಮಾತ್ರವಲ್ಲ ಮಹಿಳೆಯರು ಮತ್ತು ಹುಡುಗಿಯವರು ಸಕಾರಾತ್ಮಕ ಭವಿಷ್ಯವನ್ನು ಕಲ್ಪಿಕೊಳ್ಳಲು ಈ ಮೂಲಕ ಅವರಿಗೆ ಸಹಕಾರವಾಗುತ್ತದೆ ಎಂದು ತಿಳಿಸಿಕೊಟ್ಟಳು.

ಸಭೆ : ಕರ್ತನೇ, ನಿನಗೆ ಉಪಕಾರ ಸಲ್ಲಿಸುತ್ತೇವೆ.

ನಾಯಕ : ಗಣಿಗಾರಿಕೆ ಕಂಪನಿಗಳು, ಸ್ಥಳೀಯ ಸಮುದಾಯಗಳು ಮತ್ತು ಅಧಿಕಾರಿಗಳ ನಡುವಿನ ಸಮುದಾಯಗಳನ್ನು ಸುಧಾರಿಸಲು ಸಹಾಯ ಮಾಡುತ್ತಿರುವ ಪಶ್ಚಿಮ ಆಫ್ರಿಕಾದ ಮಾಲಿಯ ಮಸಾರನ್ ಎಂಬಾಕೆಗಾಗಿಯೂ ಮತ್ತು ಶಾಂತಿ ನಿರ್ಮಾಣದ ಉಪಕ್ರಮಗಳಲ್ಲಿ ಮಹಿಳೆಯರು ಹೆಚ್ಚು ಸಕ್ರಿಯವಾಗಿ ಭಾಗವಹಿಸಲು ವ್ಯಾಪಾರ ಹಾಗೂ ಮಾನವ ಹಕ್ಕುಗಳ ವಿಷಯದಲ್ಲಿ ಆಕೆಯು ಅವರಿಗೆ ನೀಡುತ್ತಿರುವ ಮಾರ್ಗದರ್ಶನಕ್ಕಾಗಿಯೂ ನಾವು ನಿನಗೆ ಆಭಾರಿಗಳಾಗಿದ್ದೇವೆ.

ಸಭೆ : ಕರ್ತನೇ, ನಿನಗೆ ಉಪಕಾರ ಸಲ್ಲಿಸುತ್ತೇವೆ.

ನಾಯಕ : ಸ್ವಜನ, ಧರ್ಮ ಅಥವಾ ರಾಷ್ಟ್ರೀಯತೆ ಎಂಬ ಬೇಧವಿಲ್ಲದೇ ಎಲ್ಲಾ ಅಡೆತಡೆಗಳನ್ನು ಮೀರಿ ಜನರಿಗಾಗಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದ ನಮ್ಮವರೇ ಆದ ಮದರ್ ತೆರೇಸಾರವರನ್ನು ಸ್ಮರಿಸಿ ನಿನಗೆ ಸ್ತೋತ್ರ ಸಲ್ಲಿಸುತ್ತೇವೆ. ಈ ಮೂಲಕ ತನ್ನ ಸಂದೇಶದೊಂದಿಗೆ ಪ್ರತಿ ಮಾನವರಿಗೆ ಸಹಜರೀತಿಯಲ್ಲಿ ಮನಮುಟ್ಟುವಂಥವರಾಗಲು ಸಹಾಯವಾಯಿತು. ಮಾನವ ಘನತೆಗೆ ಕುಂದುಬಾರದಂತೆ ಶಾಂತಿಯನ್ನು ಅತ್ಯಂತ ಮೂಲಭೂತ ರೀತಿಯಲ್ಲಿ ಉತ್ತೇಜಿಸಿದರು.

ಸಭೆ : ಸಂಘರ್ಷಗಳನ್ನು ಪರಿಹರಿಸಲು ಮತ್ತು ಶಾಂತಿಯನ್ನು ಸ್ಥಾಪಿಸಲು ಕಷ್ಟಕರವಾದ ಹಾದಿಯಲ್ಲಿ ಹಾದುಹೋದ ನಮ್ಮ ಪೂರ್ವಿಕ ರೆಲ್ಲರಿಗಾಗಿಯೂ ನಾವು ನಮ್ಮನ್ನೂ ಸಾಧನಗಳನ್ನಾಗಿ ರೂಪಿಸು ಮತ್ತು ಶಾಂತಿಯನ್ನು ಕಾಪಾಡಲೂ ಅಭಿವೃದ್ಧಿಗೊಳಿಸಲೂ ಅನೇಕ ನಾಯಕಿಯರನ್ನು ಎಬ್ಬಿಸು. ಸತ್ಯವೇದದಲ್ಲಿ ಕಂಡುಬರುವ ಶಾಂತಿಯನ್ನು ಉಂಟುಮಾಡುವ ಸೇತುವೆಗಳಾದ ಆದರ್ಶ ಸ್ತ್ರೀಯರಿಗಾಗಿ ನಾವು ನಿನಗೆ ಉಪಕಾರವನ್ನು ಸಲ್ಲಿಸುತ್ತೇವೆ.

ಸತ್ಯವೇದ ಪಾರಾಯಣ :

ಮೊದಲನೇ ಪಾರಾಯಣ : ಸಾಮುವೇಲ 14 : 1 – 10

ವಿಶೇಷ ಗೀತೆ/ಕಿರು ನಾಟಕ : ಮಹಿಳಾ ಅನ್ಯೋನ್ಯ ಕೂಟದವರಿಂದ

ಎರಡನೇ ಪಾರಾಯಣ : ಎಫೇಸ 4 : 1 – 3

ಸಂಗೀತ / ಸಂಕೀರ್ತನೆ :

ಮೂರನೇ ಪಾರಾಯಣ : ಯೋಹಾನ 4 : 27 – 30; 39 – 42

ದೇವರ ವಾಕ್ಯ ಸಂದೇಶ :

ವಿಶ್ವಾಸದ ಅರಿಕೆ :

ಭೂಮ್ಯಾಕಾಶಗಳನ್ನು ಉಂಟುಮಾಡಿ, ಬರಿದಾದುದನ್ನು ತುಂಬಿಸಿ, ಕ್ರಮವಿಲ್ಲದಿರುವುದನ್ನು ಕ್ರಮಗೊಳಿಸಿ ತನ್ನ ಸ್ವರೂಪವನ್ನು ಸ್ತ್ರೀ–ಪುರುಷರಲ್ಲಿ ಸಾಕಾರ ಗೊಳಿಸಿದ ದೇವರನ್ನು ನಂಬುತ್ತೇವೆ. ಹೀಗೆ ಎಲ್ಲದನ್ನು ಒಳ್ಳೆಯದೆಂದು ನೋಡಿ, ತನ್ನ ಸೃಷ್ಟಿಯಲ್ಲಿ ಶಾಂತಿಯನ್ನು, ಅಭಿವೃದ್ಧಿಯನ್ನು ಕಾಣಲು ಸ್ತ್ರೀ–ಪುರುಷರಿಗೆ ಜವಾಬ್ದಾರಿಕೆಯನ್ನು ವಹಿಸಿ ಅದನ್ನು ಬಹು ಒಳ್ಳೆಯದೆಂದು ನೋಡಿದ ದೇವರನ್ನು ನಂಬುತ್ತೇವೆ. ಅಶಾಂತಿಯ ಪರಿಸ್ಥಿತಿಗಳಲ್ಲಿ ತನ್ನ ಶಾಂತಿಯನ್ನು ಸ್ಥಾಪಿಸಲು ಚರಿತ್ರೆಯಲ್ಲಿ ಸ್ತ್ರೀಯರನ್ನು ಸೇತುವೆಗಳಾಗಿ ವಿನಿಯೋಗಿಸಿದ ದೇವರನ್ನು ನಂಬುತ್ತೇವೆ. ಈ ಪ್ರಪಂಚದ ವಿಮೋಚಕನಾದ ಯೇಸುಕ್ರಿಸ್ತನನ್ನು ನಾವು ನಂಬುತ್ತೇವೆ. ಈತನು ಮೌನದ ಸಂಸ್ಕೃತಿಯನ್ನು ಮುರಿದನು ಹಾಗೂ ಸ್ತ್ರೀಯರ ಸಾಮಾಜಿಕ ಸ್ಥಾನಮಾನವನ್ನು ದೃಢೀಕರಿಸಿ ಪ್ರತಿಪಾದಿಸಿದನು. ಶೋಷಣೆ ಹಾಗೂ ದಬ್ಬಾಳಿಕೆ ನಡೆಸುವ ವ್ಯವಸ್ಥೆಗಳನ್ನು ವಿರೋಧಿಸಿ ತನ್ನ ಹೆಜ್ಜೆಜಾಡನ್ನು ಅನುಸರಿಸಲು ಆ ಮೂಲಕ ಮಾನವ ಸಮುದಾಯವನ್ನು ಕಟ್ಟಲು ನಮ್ಮನ್ನು ಕರೆದನು. ನಾವು ದೃಢವಾಗಿ ನಿಲ್ಲುವಂತೆ ನಮ್ಮನ್ನು ಸಶಕ್ತಗೊಳಿಸುವ ಪವಿತ್ರಾತ್ಮನನ್ನು ನಂಬುತ್ತೇವೆ. ನೂತನಗೊಳಿಸಿ, ಪುನಃ ಸ್ಥಾಪಿಸುವ ಮತ್ತು ಸೃಷ್ಟಿಯ ಸಮಗ್ರತೆಯಲ್ಲಿ ಎಲ್ಲಾ ಜನರು ಜೀವನದ ಸಂಪೂರ್ಣತೆಯಲ್ಲಿ ಸಹೋದಯವಾಲು ಸಹಾಯ ಮಾಡುವ ಆತ್ಮನನ್ನು ನಂಬುತ್ತೇನೆ. **ಆಮೆನ್**.

ಪರಾರ್ಥ ಪ್ರಾರ್ಥನೆ :

ನಾಯಕ : ಇಡೀ ವಿಶ್ವದ ದೇವರೇ, ಮಾನವತೆಯ ಸೃಷ್ಟಿಕರ್ತನೇ ಸುಂದರವಾದ ಸೃಷ್ಟಿಯನ್ನು ಕಾಪಾಡಲು ಮತ್ತು ನಮ್ಮ ಪರಿಸರವನ್ನು ಗೌರವಿಸಲು ನಮ್ಮ ನೆರೆಹೊರೆಯವರಿಗೆ ಪ್ರೀತಿಯನ್ನು ತೋರಿಸುವಲ್ಲಿ ನಿನ್ನ ಮನಸ್ಸನ್ನು ಅನುಗ್ರಹಿಸಿ ಸಹಾಯಿಸು.

ಸಭೆ : ಕರ್ತನೆ, ನಮ್ಮ ಪ್ರಾರ್ಥನೆಯನ್ನು ಕೇಳು.

ನಾಯಕ : ಸರ್ವ ಜನರು ಶಾಂತಿಯುತ ವಾತಾವರಣದಲ್ಲಿ ವಾಸಿಸಲೂ ಅವರು ಸೃಷ್ಟಿಸಲ್ಪಟ್ಟಿರುವ ಉದ್ದೇಶವನ್ನು ಪೂರೈಸಲೂ ಆ ಮೂಲಕ ರಾಷ್ಟ್ರಗಳ ನಡುವಿನ ಸಮಾಧಾನ ಸ್ಥಾಪನೆಗಾಗಿ ಪ್ರಾರ್ಥಿಸುತ್ತೇವೆ.

ಸಭೆ : ಕರ್ತನೆ, ನಮ್ಮ ಪ್ರಾರ್ಥನೆಯನ್ನು ಕೇಳು.

ನಾಯಕ : ಭೀಕರ ಭಯೋತ್ಪಾದನೆಯ ನಿಮಿತ್ತ ಇತ್ತೀಚೆಗೆ ಶ್ರೀಲಂಕಾದಲ್ಲಿ ನಡೆದ ಪುನರುತ್ಥಾನದ ಆರಾಧನೆಯಲ್ಲಿ ತಮ್ಮ ಪ್ರಿಯರನ್ನು ಕಳೆದು ಕೊಂಡಿರುವವರಿಗಾಗಿ ನಾವು ಪ್ರಾರ್ಥಿಸುತ್ತೇವೆ. ದುಃಖಿತಪ್ತರನ್ನು ಸಂತೈಸು ಹಾಗೂ ಅಂಧಕಾರದ ಹೃದಯಗಳನ್ನು ಪ್ರಕಾಶಗೊಳಿಸು.

ಸಭೆ : ಕರ್ತನೆ, ನಮ್ಮ ಪ್ರಾರ್ಥನೆಯನ್ನು ಕೇಳು.

ನಾಯಕ : ನೊಂದವರಿಗೆ, ಖಿನ್ನತೆಗೊಳಗಾದವರಿಗೆ, ಒಂಟಿತನದಲ್ಲಿರುವವರಿಗೆ, ಅನಾರೋಗ್ಯದಲ್ಲಿರುವವರಿಗೆ, ಪ್ರೀತಿಸಲ್ಪಡದವರಿಗೆ, ಕಿರುಕುಳಕ್ಕೊಳಗಾದವಿಗೆ, ಮತ್ತು ನಿರುದ್ಯೋಗಿಗಳಿಗೆ ಕ್ರಿಸ್ತನ ಪ್ರೀತಿಯು ಪಸರಿಸಲೆಂದು ಬೇಡಿಕೊಳ್ಳುತ್ತೇವೆ.

ಸಭೆ : ದಯಾಪರನಾದ ಕರ್ತನೆ, ನಮ್ಮ ಪ್ರಾರ್ಥನೆಯನ್ನು ಕೇಳು.

ಕರ್ತನು ಕಲಿಸಿಕೊಟ್ಟ ಪ್ರಾರ್ಥನೆ :

ಸಭಾ ಪ್ರಕಟಣೆಗಳು :

ಮಹಿಳಾ ಅನ್ಯೋನ್ಯಕೂಟದ ವರದಿ :

ಕಾಣಿಕೆ : ಸಂಗೀತ / ಸಂಕೀರ್ತನೆ ಕಾಣಿಕೆಗಾಗಿ ಪ್ರಾರ್ಥನೆ :

ಸಂಗೀತ :

ಪ್ರಾರ್ಥನೆ :

ಅಂತ್ಯಾಶೀರ್ವಾದ :

ದೀರ್ಘಶಾಂತನೂ ಉತ್ತೇಜಿಸುವವನೂ ಆಗಿರುವ ದೇವರು ನೀವು ಸಾಮರಸ್ಯದಿಂದ ಬದುಕಲು ಅನುಗ್ರಹಿಸಲಿ. ಯೇಸುಕ್ರಿಸ್ತನಲ್ಲಿ ಒಂದಾಗಿ ಆತನೊಂದಿಗೆ ಏಕಸ್ವರದಿಂದ ನಮ್ಮ ಕರ್ತನಾದ ಯೇಸುಕ್ರಿಸ್ತನ ತಂದೆಯೂ ದೇವರೂ ಆಗಿರುವಾತನಿಗೆ ಮಹಿಮೆಯುಂಟಾಗಲಿ. **ಆಮೆನ್**.